ಶ್ರೀ ಬಿ. ರಾಚಯ್ಯ.—ನಂಜನಗೂಡಿನಲ್ಲಿ ಇಲಾಖೆಯಿಂದ ಮಾನ್ಯತೆ ಮತ್ತು ಅನುದಾನ ಪಡೆದ ಶಾಲೆಯಾದ ಜ್ಯೂಬಿಲಿ ಸಂಸ್ಕೃತ ಪಾಠಶಾಲೆಯು ಪ್ರಥಮ ಮತ್ತು ಕಾವ್ಯ ತರಗತಿಗಳನ್ನು ನಡೆಸುತ್ತಿದೆ. ಆದ್ದರಿಂದ ಅಲ್ಲಿ ಕೆಳಮಟ್ಟದ ಅಥವಾ ಮೇಲು ಮಟ್ಟದ ಶಾಲೆಯನ್ನು ತೆರೆಯುವುದಕ್ಕೆ ಸರ್ಕಾರ ಅನುಮತಿ ಕೊಡುವುದಿಲ್ಲವೆಂದು ನಾನು ಹೇಳುತ್ತೇನೆ. ಮತ್ತು ಹಳೇ ಕಟ್ಟಡದ ಬಗ್ಗೆ ಏನು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ ಅಲ್ಲಿ ಇನ್ನೂ ಕಛೇರಿ ಕೆಲಸಕಾರ್ಯಗಳು ನಡೆಯುತ್ತಿದೆ. ಹಿಂದೆ ದಳವಾಯಿ ಶಾಲೆ ಎಂದು ಒಂದು ಪಾಠಶಾಲೆ ಕಟ್ಟಡ ಹಾಳಾಗಿದ್ದು ಅಲ್ಲಿನ ಮಕ್ಕಳು ಹೊರಗೆ ಬಂದಿರುವುದರಿಂದ ಈ ಹಳೇ ಕಟ್ಟಡ ತೆರವಾದ ಮೇಲೆ ಆ ಶಾಲೆಯ ಮಕ್ಕಳ ವಿದ್ಯಾಭ್ಯಾಸಕ್ಕೆ ಇದನ್ನು ಕೊಡಬೇಕೆಂದು ಇದ್ದೇವೆ.

ಶೀ ದೊಡ್ಡಬೋರೇಗೌಡ.—ನಂಜನಗೂಡು ಕ್ಷೇತ್ರ ದಕ್ಷಿಣ ಕಾಶಿ ಎಂದು ಹಾಗೂ ಅಲ್ಲಿ ಲಕ್ಷೋಪ ಲಕ್ಷ ಜನ ಬಂದು ದೇವರ ದರ್ಶನ ಮಾಡಿ ತಮ್ಮ ಕಷ್ಟಕಾರ್ಪಣ್ಯಗಳನ್ನು ನಿವಾರಣೆ ಮಾಡಿಕೊಳ್ಳುತ್ತಿದ್ದಾರೆಂದೂ ಹಾಗೂ ಅಲ್ಲಿಗೆ ಒಂದು ಸಂಸ್ಕೃತಿ ಪಾಠಶಾಲೆ ಬೇಕು ಎಂದು ಮಾನ್ಯ ಸದಸ್ಯರಾದ ಮಹದೇವ್ ಅವರು ಕೇಳಿಕೊಳ್ಳುತ್ತಿದ್ದಾರೆ. ಅಲ್ಲಿ ಒಂದು ಸಂಸ್ಕೃತಿ ಪಾಠಶಾಲೆಯನ್ನು ತೆರೆದರೆ ಮಾನ್ಯ ಮಹದೇವ್ ಅವರನ್ನು ಅಲ್ಲಿ ನೇಮಕ ಮಾಡುವುದಕ್ಕೆ ಆಗುತ್ತದೆಯೇ ಎಂಬುದನ್ನು ಪರಿಶೀಲಿಸಬೇಕು.

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರು ಕೇಳುತ್ತಿರುವುದು ಸಂಸ್ಕೃತಿ ಪಾಠಶಾಲೆ ಅಲ್ಲ. ಅವರು ಕೇಳುತ್ತಿರುವುದು ಸಂಸ್ಕೃತ ಪಾಠಶಾಲೆಯನ್ನು.

ವಿಷಯ :— ಯಾದಗಿರ್ ತಾಲ್ಲೂಕಿಗೆ ಹೊರ ಯೋಜನೆಗಳ ಮಂಜೂರಾತಿ.

ಪ್ರ. ಸಂ. 597 (1412) ಶ್ರೀ ಮಲ್ಲಿಕಾರ್ಜುನ ಖಾರ್ಗೆ (ಗುರುಮಿಟ್‌ಕಲ್).—ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ಯ ಮತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ. 1983-84ನೆಯ ಸಾಲಿನಲ್ಲಿ ಯಾದಗೀರ್, ತಾಲ್ಲೂಕಿನಲ್ಲಿ ಆದರಲ್ಲಿ ವಿಶೇಷವಾಗಿ 'ಗುರುಮಿಟಕಲ್' ಕ್ಷೇತ್ರದಲ್ಲಿ ಮಂಜೂರಾಗಿದ್ದ ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆಗಳು ಮತ್ತು ರಾಜ್ಯದ ಸ್ವಂತ ಯೋಜನೆಗಳ ಸಂಖ್ಯೆ ಎಷ್ಟು ;

ಆ. ಯಾದಗೀರ್ ತಾಲ್ಲೂಕಿನಲ್ಲಿ ಪ್ರಸಕ್ತ ಯೋಜನೆಗಳನ್ನು ಕಾರ್ಯರೂಪದಲ್ಲಿ ತರಲು ತೆಗೆದುಕೊಂಡ ಕ್ರಮವೇನು ;

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):—

ಅ. 1983-84ನೆಯ ಸಾಲಿನಲ್ಲಿ ಯಾದಗೀರ್ ತಾಲ್ಲೂಕಿನಲ್ಲಿ ಕೇಂದ್ರ ಘಟಕದಲ್ಲಿ 4 ಯೋಜನೆಗಳು ಹಾಗೂ ರಾಜ್ಯ ಘಟಕದಲ್ಲಿ 7 ಯೋಜನೆಗಳು ಮಂಜೂರಾಗಿದೆ, ಮತ್ತು ವಿಶೇಷವಾಗಿ 'ಗುರುಮಿಟಕಲ್' ಕ್ಷೇತ್ರದಲ್ಲಿ ಕೇಂದ್ರ ಘಟಕದಲ್ಲಿ 2 ಯೋಜನೆಗಳು ಮತ್ತು ರಾಜ್ಯ ಘಟಕದಲ್ಲಿ 5 ಯೋಜನೆಗಳು ಮಂಜೂರಾಗಿದೆ.

ಆ. 11 ಯೋಜನೆಗಳ ಪೈಕಿ, 8 ಯೋಜನೆಗಳಿಂದ ಈಗಾಗಲೇ ನೀರು ಸರಬರಾಜು ಮಾಡಲಾಗುತ್ತಿದೆ ಮತ್ತು 2 ಯೋಜನೆಗಳ ಕೆಲಸಗಳು ಮುಗಿಯುವ ಹಂತದಲ್ಲಿವೆ, 4 ಯೋಜನೆಗಳು 1984-85ನೇ ಸಾಲಿನಲ್ಲಿ ಪೂರ್ತಿಗೊಳಿಸುವ ಗುರಿ ಹೊಂದಿರುವ ಪಟ್ಟಿಯಲ್ಲಿ ಸೇರಿರುತ್ತದೆ ಮತ್ತು ಉಳಿದ 2 ಯೋಜನೆಗಳನ್ನು ಬರುವ ವರ್ಷಗಳಲ್ಲಿ ಹಣ ಪಡೆದು ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿದೆ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕೇಂದ್ರ ಘಟಕದಲ್ಲಿ 4 ಹಾಗೂ ರಾಜ್ಯ ಘಟಕದಲ್ಲಿ 7 ಯೋಜನೆಗಳು ಮಂಜೂರು ಆಗಿದೆ ಎಂದು ಹೇಳಿದ್ದಾರೆ. ಈ ಒಟ್ಟು 11 ಯೋಜನೆಗಳಿಗೆ ತೊಡಗಿಸಿರುವ ಒಟ್ಟು ಹಣ ಎಷ್ಟು ? ಹಾಗೂ ಎಷ್ಟು ಹಣ ಖರ್ಚು ಮಾಡಲಾಗಿದೆ. ಮತ್ತು ಇವು ಯಾವ ಯಾವ ಊರುಗಳಲ್ಲಿ ಇವೆ ? ಹಾಗೂ 1984-85 ರಲ್ಲಿ ಉಳಿದವನ್ನು ರಾಜ್ಯ ಹಾಗೂ ಕೇಂದ್ರ ಘಟಕಗಳಲ್ಲಿ ಯಾವ ಯಾವ ಸ್ಥಳದಲ್ಲಿ ತೆಗೆದುಕೊಳ್ಳುತ್ತೀರಿ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೇ, ಈಗ ಕೇಂದ್ರ ಘಟಕದ ಬಗ್ಗೆ ಹೇಳಬೇಕಾದರೆ ಲಿಂಗೇರಿ ಎಂಬಲ್ಲಿ 84 ಸಾವಿರ ರೂಪಾಯಿಯ ಯೋಜನೆ ಇದೆ. ಇದು ಗುರುಮಟ್ಕಲ್

ಕ್ಷೇತ್ರುಕ್ಕೆ ಬರುತ್ತದೆ. ಇಲ್ಲಿ ಕೆಲಸ ಮುಗಿದಿದೆ. ಇದು ಕಮಿಷನ್ ಆಗಿದ್ದು ನೀರು ಕೊಡಲಾಗುತ್ತಿದೆ. ಇನ್ನು ಮಲ್ಲಾರ್ ಯೋಜನೆ 1.19 ಲಕ್ಷ ರೂಪಾಯಿ ಯೋಜನೆ ಇದ್ದು ಇದರ ಕೆಲಸ ಪ್ರಗತಿಯಲ್ಲಿದ್ದು ಇದರ ಬಗ್ಗೆ ಆಗಿರುವ ವೆಚ್ಚದ ಬಗ್ಗೆ ಮಾಹಿತಿ ಇಲ್ಲ. ಅದನ್ನು ಒದಗಿಸುತ್ತೇನೆ. ಇನ್ನು ಅರಕೆರೆ ಯೋಜನೆ 1.15 ಲಕ್ಷ ರೂಪಾಯಿಯ ಯೋಜನೆ ಆಗಿದ್ದು ಕೆಲಸ ಪೂರ್ಣಗೊಳ್ಳುವ ಹಂತದಲ್ಲಿ ಇದೆ. ಇನ್ನು ಮುಂದರ್ಗ ಯೋಜನೆ 2.25 ಲಕ್ಷದ್ದಾಗಿದ್ದು ಕೆಲಸ ಪ್ರಗತಿಯಲ್ಲಿ ಇದೆ. ಹಾಗೂ ಎಷ್ಟುವೆಚ್ಚ ಆಗಿದೆ ಎಂಬ ಬಗ್ಗೆ ಮಾಹಿತಿ ಇಲ್ಲ. ಇನ್ನು ರಾಜ್ಯ ವಲಯದ ಘಟಕಗಳ ಬಗ್ಗೆ ಹೇಳಬೇಕೆಂದರೆ, ಎಲ್ಲಾರ್ ಯೋಜನೆ 99 ಸಾವಿರ ರೂಪಾಯಿಯದ್ದಾಗಿದ್ದು ಕೆಲಸ ಪೂರ್ಣಗೊಂಡಿರುತ್ತದೆ. ಬಿಲ್ಲಚಕ್ಕರೆ ಯೋಜನೆ 2.50 ಲಕ್ಷ ರೂಪಾಯಿಗಳದ್ದಾಗಿದ್ದು ಅಲ್ಲಿ ಡೈರೆಕ್ಟಾಗಿ ಕಮಿಷನ್ ಮಾಡಿದ್ದೇವೆ. ಎಂದರೆ ಅಲ್ಲಿ ಟ್ಯಾಂಕ್ ಆಗಿಲ್ಲ. ಡೈರೆಕ್ಟ್ ಕನೆಕ್ಷನ್ ಕೊಟ್ಟಿದ್ದೇವೆ. ಇನ್ನು ಗಾಜರ್‌ಕೋಟ್ ಯೋಜನೆ 7 ಲಕ್ಷ 5 ಸಾವಿರ ರೂಪಾಯಿಗಳದ್ದಾಗಿದ್ದು ಇನ್ನೂ ಕೆಲಸವನ್ನು ತೆಗೆದುಕೊಂಡಿರುವುದಿಲ್ಲ. ಏಕೆಂದರೆ ಈ ಯೋಜನೆ ಬಗ್ಗೆ 1981-82, 1982-83 ಮತ್ತು 1983-84 ರಲ್ಲಿ ತಲಾ ಒಂದೊಂದು ಸಾವಿರ ರೂಪಾಯಿಗಳನ್ನು ಬಜೆಟ್‌ನಲ್ಲಿ ಪ್ರಾವಿಷನ್ ಮಾಡಲಾಗಿದ್ದು ಕೆಲಸ ಕೈಗೆತ್ತಿಕೊಂಡಿರುವುದಿಲ್ಲ. ಇನ್ನು ಕಾಕನವಾರ್ ಯೋಜನೆ 1.75 ಲಕ್ಷ ರೂಪಾಯಿಯದ್ದಾಗಿದ್ದು ಇದನ್ನು ತೆಗೆದುಕೊಂಡಿಲ್ಲ. ಎಂಪಾಡ್ 1.55 ಲಕ್ಷ ರೂಪಾಯಿಯದ್ದಾಗಿದ್ದು ಅದನ್ನೂ ತೆಗೆದುಕೊಂಡಿರುವುದಿಲ್ಲ. ಇನ್ನು ಹೆಡ್ಡಿಮೇಂದ ಯೋಜನೆ 1.60 ಲಕ್ಷ ರೂಪಾಯಿಯದ್ದಾಗಿದ್ದು 1983-84ರಲ್ಲಿ ಇದು ಪೂರ್ಣಗೊಳ್ಳುತ್ತದೆ. ಮತ್ತು ಸೈದಾವುರ್ 1.75 ಲಕ್ಷ ರೂಗಾಯಿ ಯೋಜನೆಯಾಗಿದ್ದು ಈ ಕೆಲಸವನ್ನು ತೆಗೆದು ಕೊಂಡಿರುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.–ಅಧ್ಯಕ್ಷರೇ, ಈಗ ನಾನು ಪ್ರಶ್ನೆ ಕೇಳಿರತಕ್ಕ ಉದ್ದೇಶ ಇಷ್ಟೇ. ಈಗ ಎಂಪಾಡ್ ಪ್ರಾಬ್ಲಮ್ಯಾಟಿಕ್ ವಿಲೇಜ್ ಆಗಿದೆ. ಅಲ್ಲಿ ಸುಮಾರು 1,500 ಕುಟುಂಬಗಳು ಲಂಬಾಣಿ ಜನಾಂಗದವರದ್ದು ಇವೆ. ಇನ್ನು ಕಾಕನ್‌ವಾರ್ ಬಗ್ಗೆ ನಾನು ಪದೇಪದೇ ಬರೆದು ತಿಳಿಸುತ್ತಿದ್ದೇನೆ. ಇಲ್ಲೆಲ್ಲಾ ನೀರಿನ ಸಮಸ್ಯೆ ಬಹಳ ಇದೆ. ಅಲ್ಲಿ ಆನ್‌ಟಿಚಬಲಿಟಿ ಜಾಸ್ತಿ ಇದ್ದು ಯಾವಾಗಲೂ ಜಗಳ ನಡೆಯುತ್ತಿರುವುದರಿಂದ ಅಲ್ಲಿ ಎನ್. ಆರ್. ಡಬ್ಲ್ಯು. ಸ್ಕೀಮ್‌ಗಳನ್ನು ಮಾಡಿಸಲಾಯಿತು. ಹಾಗೂ 3-4 ಊರುಗಳಲ್ಲಿ ಏನೂಕೆಲಸ ಪ್ರಾರಂಭ ಆಗಿಲ್ಲ ಎಂದು ಹೇಳುತ್ತಿದ್ದೀರಿ ಅಲ್ಲಿ ಒಂದು ವೇಳೆ ಕೆಲಸ ಪ್ರಾರಂಭ ಮಾಡದೇ ಹೋದರೆ ಅಲ್ಲಿನ ಜನರಿಗೆ ತೊಂದರೆಯಾಗುತ್ತದೆ. ಹಾಗೂ ಅಲ್ಲಿ ಆಗಾಗ ಕಮ್ಯುನಲ್ ಕ್ಲಾಷ್ ಬಹಳ ಆಗುತ್ತವೆ. ಎಂಪಾಡ್, ಕಾಕನವಾರ್, ಗಾಜರಕೊಟ್‌ನಲ್ಲಿ ಕೆಲಸ ಪ್ರಾರಂಭವಾಗಿರುವುದಿಲ್ಲ. ಹಾಗೂ ಗಾಜರಕೊಟ್‌ನಲ್ಲಿ ಪ್ರತಿ ವರ್ಷ ಒಂದು ಸಾವಿರ ರೂಪಾಯಿ ಪ್ರಾವಿಷನ್ ಮಾಡಿರುವ ಬಗ್ಗೆ ಹೇಳುತ್ತಿದ್ದೀರಿ. ಈ ದಿನ ತಾವು 1 ಲಕ್ಷ 2 ಲಕ್ಷದ ಎಸ್ಟಿಮೇಟ್ ಮಾಡಿ ಅದಕ್ಕೆ 1 ಸಾವಿರ, 2 ಸಾವಿರ ರೂಪಾಯಿ ಪ್ರಾವಿಜನ್ ಮಾಡಿದರೆ ಅದು ಎಲ್ಲಿ ಸಾಲುತ್ತದೆ ? ಇವತ್ತು ಇಷ್ಟು ಹಣ ಇಟ್ಟು ಹೇಗೆ ಕೆಲಸವನ್ನು ಪ್ರಾರಂಭ ಮಾಡುತ್ತೀರಿ ಎಂಬುದನ್ನು ಹೇಳಬೇಕಾಗುತ್ತದೆ. ಇವತ್ತು ಅಲ್ಲಿ 1 ಸಾವಿರ ಪ್ರಾವಿಸನ್ ಮಾಡಿರುವುದರಿಂದ ಕೆಲಸ ತೆಗೆದು ಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದೀರಿ. ಹಾಗು ತಾವು future programmes, as and when funds become available ಎಂದು ಸಹಾ ಹೇಳುತ್ತಿದ್ದೀರಿ. ನೀವು ಎಂದು ಈ ಕೆಲಸಗಳನ್ನು ಮುಗಿಸಿ ನೀರನ್ನು ಕೊಡುತ್ತೀರಿ ಎಂಬ ಬಗ್ಗೆ ಸ್ಪಷ್ಟವಾಗಿ ಹೇಳಬೇಕಾಗುತ್ತದೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಪದೇ ಪದೇ ಹೇಳಿದ್ದೇನೆ. 1976ರಿಂದ 2900 ಚಿಲ್ಲರೆ ಸ್ಕೀಮುಗಳು ಇದ್ದುವು. ಒಂದು ಸಾವಿರ ರೂಪಾಯಿ ಟೋಕನ್ ಗ್ರಾಂಟ್ ಕೊಡುತ್ತಿದ್ದರು. ಟಾರ್ ಗೆಟೆಡ್ ಗ್ರೂಪ್‌ನಲ್ಲಿ ಇರಲಿಲ್ಲ. ಆದ್ದರಿಂದ, ನಾವು ಅಧಿಕಾರಕ್ಕೆ ಬಂದಮೇಲೆ ಎಲ್ಲಾ ಹಳ್ಳಿಗಳಿಗೂ ಕೊಡುವುದಕ್ಕಿಂತಲೂ ಕೆಲವು ಕಡೆಗಳಲ್ಲಿ ಮಾಡಿ 460 ಕೆಲಸ ಈ ಮಾರ್ಚಿಯಲ್ಲಿ ಮುಗಿದಿವೆ. ಇದೇ ಉದ್ದೇಶದಿಂದ ಮುಂದಿನ ಸಾರಿಯೂ ಕೂಡ ಮುಗಿಸಬೇಕೆಂದು ಇದ್ದೇವೆ. ಒಂದು ಸಾವಿರ ರೂಪಾಯಿ ಟೋಕನ್ ಗ್ರಾಂಟ್ ಪಡೆದ ಕೆಲಸಗಳು ಏನಿವೆ, ಕೇಂದ್ರ ಹಾಗೂ ರಾಜ್ಯ ವಲಯಕ್ಕೆ ಸಂಬಂಧಪಟ್ಟಂತೆ, ಆ ಕೆಲಸಗಳನ್ನು ಮುಗಿಸಬೇಕಾಗಿದ್ದರೆ, 60 ಕೋಟಿ ರೂಪಾಯಿ ಬೇಕಾಗುತ್ತದೆ. 8 ಕೋಟಿ ರೂಪಾಯಿ ನಮ್ಮ ನಳದ ಯೋಜನೆಗೆ ಮಾಡುತ್ತೇವೆ. 1976ರಿಂದ ಮುಂದುವರಿಸಿ, ಈಗ ಮುಗಿಸಿ ಎಂದು ನನ್ನ ಮೇಲೆ ಜವಾಬ್ದಾರಿ ಹಾಕಿದರೆ ಕಷ್ಟವಾಗುತ್ತದೆ. ಒಂದೊಂದು ತಾಲ್ಲೂಕಿನಲ್ಲಿ ಹಳೆಯ ಕೆಲಸಗಳು ಒಂದೆರಡು ಹೊಸ ಕೆಲಸಗಳು ಒಂದೆರಡು ಮಾಡಿ ಒಂದು ವರ್ಷದಲ್ಲಿ ಮುಗಿಸಬೇಕೆಂದು ಇದ್ದೇವೆ. ಆ ಬಗ್ಗೆ ಆಯಾ ಕ್ಷೇತ್ರದ ಶಾಸಕರನ್ನು ಕರೆಯಿಸಿ ಅವರು ಯಾವುದು ಮುಖ್ಯವಾಗಿ ಮಾಡಬೇಕೆಂದು ಹೇಳುತ್ತಾರೆ ಅದನ್ನು ಮುಗಿಸಿಕೊಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಈಗ ಒಟ್ಟು 11ರಲ್ಲಿ 5-6 ಈಗಾಗಲೇ ಕಂಪ್ಲೀಟ್ ಆಗಿವೆ ಮೂರು ನಾಲ್ಕು ಪ್ರಾಬ್ಲಮ್ಯಾಟಿಕ್ ವಿಲೇಜ್‌ಗಳು ಇವೆ, ಇದನ್ನು ಹೇಳುತ್ತಿದ್ದೇನೆ. ತಾವು ಫಂಡ್ ದೊರಕಿದಾಗ ಮಾಡುತ್ತೇವೆಂದರೆ ಆಗುವುದಿಲ್ಲ. ಮೂರು ವಿಲೇಜಸ್ ಸೇರಿದರೆ ನನಗೆ ಬೇಕಾದ್ದು

ನಾಲ್ಕು ಲಕ್ಷ ರೂಪಾಯಿ. ಸ್ಪೆಷಲ್ ಕೇಸ್ ಅಂಥ ಹೇಳಿ ಮೂರು ನಾಲ್ಕು ಹಳ್ಳಿಗಳಿಗೆ ಕೊಡುತ್ತೇವೆಂದು ಭರವಸೆ ಕೊಟ್ಟರೆ ಸಾಕು.

ಶ್ರೀ ಅಬ್ದುಲ್ ನಜೀರ್‌ಸಾಬ್.—ಕಾಕಲವಾರ, ಎಂಪಾಡ್, ಮಲಾಡ್, ಮುದರಗ, ಈ ನಾಲ್ಕನ್ನು ಮುಗಿಸಿಕೊಡುತ್ತೇನೆ.

ವಿಷಯ :- ಕೋಲಾರ ಜಿಲ್ಲೆಯಲ್ಲಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯ ದುರುಪಯೋಗ

ಪ್ರ. 598(1635) ಶ್ರೀ ವೆಂಕಟ ಶಿವರೆಡ್ಡಿ (ಶ್ರೀನಿವಾಸಪುರ).—ಮಾನ್ಯ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ. ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯನ್ವಯ ಬಿಡುಗಡೆಯಾದ ಹಣವು ಸರ್ಕಾರಿ ಅಧಿಕಾರಿಗಳ ಶಾಮೀಲಿನೊಂದಿಗೆ ಕೋಲಾರ ಜಿಲ್ಲೆಯಲ್ಲಿ ದುರುಪಯೋಗ ವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ. ಹಾಗಿದ್ದಲ್ಲಿ ಈ ದುರುಪಯೋಗವನ್ನು ತಡೆಯಲು ಸರ್ಕಾರವು ತೆಗೆದುಕೊಂಡ ಕ್ರಮ ಗಳೇನು ;

ಇ. ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯ ದುರುಪಯೋಗಕ್ಕೆ ಸಂಬಂಧಿಸಿದಂತೆ ಪತ್ತೆ ಮಾಡದ ಕೇಸುಗಳ ಸಂಖ್ಯೆಗಳೆಷ್ಟು ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :—

ಅ. ಕೋಲಾರ ಜಿಲ್ಲೆಯಲ್ಲಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಈ ದುರುಪಯೋಗವು ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಂಘದ ಅಧಿಕಾರಿಗಳ ಶಾಮೀಲಿನಿಂದ ಆಗಿರುವುದಿಲ್ಲ. ಆದಾಗ್ಯೂ ಒಂದೇ ಒಂದು ಸಂದರ್ಭದಲ್ಲಿ ಮಾತ್ರ ಅಧಿಕಾರಿಗಳ ಶಾಮೀಲಿನಿಂದ ದನಕರುಗಳ ಕೊಳ್ಳುವಿಕೆಯಲ್ಲಿ ದುರುಪಯೋಗವಾದ ಆಪಾದನೆ ಸರ್ಕಾರದ ಗಮನಕ್ಕೆ ಬಂದಿದೆ.

ಆ. ಹಣವನ್ನು (ಸಾಲ ಮತ್ತು ಸಹಾಯ ಧನ) ದುರುಪಯೋಗಪಡಿಸಿಕೊಂಡಿರುವ ಫಲಾನುಭವಿಗಳ ಮೇಲೆ ಕ್ರಮ ತೆಗೆದುಕೊಳ್ಳುವಂತೆ ಸಂಬಂಧಿಸಿದ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ನಿರ್ದೇಶಿಸಲಾಗಿದೆ. ಒಂದು ಮೊಕದ್ದಮೆಯಲ್ಲಿ ಮಾಲೂರು ತಾಲ್ಲೂಕಿನ ಒಬ್ಬ ಪಶು ಸಂಗೋಪಸಾ ವಿಸ್ತರಣಾಧಿಕಾರಿಯನ್ನು ದಿನಾಂಕ 22-12-83ರಂದು ಅಮಾನತ್ತಿನಲ್ಲಿಡ ಲಾಗಿದೆ.

ಇ. ಕಂಡುಹಿಡಿದ ಕೇಸುಗಳ ವಿವರಗಳನ್ನು ಅನುಬಂಧ 1ರಲ್ಲಿ ನಮೂದಿಸಲಾಗಿದೆ.